ಇ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ಹಿಂದಿನ 3 ವರ್ಷಗಳಲ್ಲಿ ನೋಂದಾದ ದಸ್ತಾವೇಜುಗಳ ಸರಾಸರಿ ಸಂಖ್ಯೆ 8,335 ಅವುಗಳಲ್ಲಿ ತೇರದಾಳ್ ಪಟ್ಟಣ ವ್ಯಾಪ್ತಿಗೆ ಬರುವ ಗ್ರಾಮಗಳಿಂದ ಹಿಂದಿನ 3 ವರ್ಷಗಳಲ್ಲಿ ನೋಂದಣಿಯಾಗಿರುವ ದಸ್ತಾವೇಜುಗಳ ಸಂಖ್ಯೆ 2162 ಇದರಿಂದಾಗಿ, ತೇರದಾಳ್ ಪಟ್ಟಣದಲ್ಲಿ ಉಪ ನೋಂದಣಿ ಕಛೇರಿಯನ್ನು ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು

ಈ) ಪ್ರಸಕ್ತ ಸಾಲಿನಲ್ಲಿ ವಿವಿಧ ಸ್ಥಳಗಳಲ್ಲಿ 9 ಉಪ ನೋಂದಣಿ ಕಛೇರಿಗಳನ್ನು ಪ್ರಾರಂಭಿಸಲು ತಾತ್ವಿಕವಾಗಿ ಅನುಮೋದನೆ ನೀಡಿದೆ

1381 ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) – ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ನಡೆಸುವ ಸಭೆಗಳು ವರ್ಷಕ್ಕೆ ಎಷ್ಟು ಬಾರಿ ನಡೆಯುತ್ತವೆ,

ಆ) ಈ ಸಭೆಗಳಿಗೆ ಅಪೇಕ್ಷಿತರಿರುವ ಇಲಾಖೆ ಹಾಗೂ ಅಧಿಕಾರಿಗಳು ಯಾರ್ಯಾರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳುಈ ಸಭೆಯಲ್ಲಿ ಹಾಜರಿರುವಂತೆ ಸೂಚನೆ ನೀಡಲಾಗಿದೆಯೇ,

ಇ) ಹಾಗಿಲ್ಲದಿದ್ದಲ್ಲಿ, ಜಿಲ್ಲಾ ಮಟ್ಟದ ಸಭೆಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಾಗುತ್ತಿರುವುದು ನಿಜವೇ,

ಈ) ನಿಜವಾಗಿದ್ದಲ್ಲಿ, ಅರಸೀಕೆರೆ ತಾಲ್ಲೂಕು ಒಳಗೊಂಡಂತೆ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆಂದು ಹೋಗುತ್ತಿರುವುದರ ಔಚಿತ್ಯವೇನು,

ಉ) ಇದರಿಂದಾಗಿ ಕಛೇರಿಗಳಲ್ಲಿ ಅಧಿಕಾರಿಗಳಿಲ್ಲದೆ ಸಾರ್ವಜನಿಕರ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಸದರಿ ಸಭೆಗಳನ್ನು ನಡೆಸಲು ಇರುವ ಮಾರ್ಗಸೂಚಿ ಮಾನದಂಡಗಳೇನು,

ಇವುಗಳನ್ನು ಪಾಲಿಸದಿರಲು ಕಾರಣಗಳೇನು,

ಊ) ಜಿಲ್ಲಾ ಮಟ್ಟದ ಸಭೆಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳ ಅಗತ್ಯವಿದೆಯೇ? (ವಿವರ ಒದಗಿಸುವುದು)

ಶ್ರೀ ರಾಮಚಂದ್ರಗೌಡ (ಮಾನ್ಯ ಯೋಜನಾ ಸಚಿವರು)

ಅ, ಆ, ಇ) ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ತಿಂಗಳಿಗೆ ಒಂದರಂತೆ ವರ್ಷಕ್ಕೆ 12 ಬಾರಿ ಸಭೆಗಳು ನಡೆಯುತ್ತವೆ

ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳು ಕೆಡಿಪಿ ಸಭೆಗೆ ಹಾಜರಾಗಬೇಕಾಗುತ್ತದೆ ತಾಲ್ಲೂಕು ಮಟ್ಟದ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಲು ಸಭೆಗೆ ಆಹ್ವಾನಿಸಲಾಗುವುದು

ಈ) ಹಾಸನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಎಲ್ಲ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆ ಹಾಜರಾಗುತ್ತಿಲ್ಲವೆಂದು ತಿಳಿಸಿರುತ್ತಾರೆ

ಉ) ಉದ್ಭವಿಸುವುದಿಲ್ಲ

ಊ) ಅಗತ್ಯವಿದೆ ತಾಲ್ಲೂಕು ಮಟ್ಟದ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳಾದ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಎಸ್ ಜಿ ಎಸ್ ವೈ, ಎಂ ಎಂ ಆರ್ ಕೆ ಡಿ ಪಿ ಆಶ್ರಯ, ಸುವರ್ಣ ಗ್ರಾಮೋದಯ ಯೋಜನೆಗಳಂತಹ ಯೋಜನೆಗಳ ಪ್ರಗತಿ ಪರಿಶೀಲಿಸಲು ಆಹ್ವಾನಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ

944 ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ – ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2007 ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ಪ್ರದೇಶ ಎಷ್ಟು , (ವರ್ಷವಾರು ವಿವರ ನೀಡುವುದು)